## 11

# ಗುರಿಯನ್ನು ನೇಮಿಸುವುದು

"ಮಾತನಾಡಲಿಕ್ಕೆ ಕಲಿಯುವುದು ಕಠಿಣವಾಗಿರುವದಿಲ್ಲ" ಎಂದು ಯಾರೋ ಒಬ್ಬರು ಹೇಳಿದ್ದಾರೆ. "ಅದು ಈಜುವದನ್ನು ಕಲಿಯುವಂತಿದೆ. ಕೆಳಗೆ ಧುಮುಕುವುದು ಮತ್ತು ನೀರು ಸಿಡಿಯುವಂತೆ ಹೊಡೆಯುವುದು." ಕೆಲವು ಸಲ ನಾಯಕರು ತಮ್ಮ ಕೆಲಸವನ್ನು ಆ ರೀತಿಯಲ್ಲಿ ಕಾಣುತ್ತಾರೆ: ಕೇವಲ "ಕೆಳಕ್ಕೆ ಧುಮುಕಿ, ನೀರು ಸಿಡಿಯುವಂತೆ ಹೊಡೆಯುವುದು" ಆದರೆ ತಮ್ಮ ಕೆಲಸವು ಆದಂತೆಯೇ ಎಂದು ಅವರು ಯೋಚಿಸುತ್ತಾರೆ. "ತನ್ನ ಕುದುರೆಯ ಮೇಲೆ ಜಿಗಿದು ಕುಳಿತನು ಮತ್ತು ಎಲ್ಲಾ ದಿಕ್ಕುಗಳಲ್ಲಿ ಸವಾರಿ ಮಾಡಿದನು" ಎಂಬುದಾಗಿ ಹೇಳಲ್ಪಟ್ಟ ಹೊಲ್ಲಿವುಡ್ ಕೌಬಾಯ್‌ಯಂತೆ ಅವರು ಇರಬಹುದು. ನಾಯಕರು "ಎಲ್ಲಾ ದಿಕ್ಕುಗಳಲ್ಲಿ ಸವಾರಿ ಮಾಡುತ್ತಿರಬಹುದು." ಅವರು ಕಾರ್ಯನಿರತರಾಗಿರುವದರಿಂದ ತಾವು ತಮ್ಮ ಸೇವೆಯನ್ನು ನೆರವೇರಿ ಸುತ್ತಿರುವೆವು ಎಂದು ಯೋಚಿಸುತ್ತಾರೆ. ಅವರು ಹಾಗಿರದೇ ಇರಬಹುದು. ತನ್ನ ಸ್ವಂತಕ್ಕಾಗಿರುವ ಚಟುವಟಿಕೆಯು ಉಪಯೋಗವಿಲ್ಲದ್ದಾಗಿರುತ್ತದೆ. "ಮಾರ್ಗದರ್ಶನವಿಲ್ಲದ" ಚಳವಳಿಯು ಏನನ್ನೂ ಸಾಧಿಸುವದಿಲ್ಲ.

ಸಭೆಯ ನಾಯಕರಿಗೆ ಅಗತ್ಯವಾಗಿರುವ ವ್ಯವಸ್ಥಾಪನೆಯ ಕೌಶಲ್ಯಗಳಲ್ಲಿ, ಗುರಿಗಳನ್ನು ನೇಮಿಸುವದಕ್ಕೆ ಸಾಮರ್ಥ್ಯವು ಮೊದಲನೆಯ ಸ್ಥಾನದಲ್ಲಿರತಕ್ಕದ್ದು. *ನಾಯಕರುಗಳಿಗೆ ಗುರಿಗಳು ಇರತಕ್ಕದ್ದು.*[1] ನಾಯಕತ್ವವು ಮುಂಚಿತವಾಗಿ ನಿರ್ಧರಿಸಿದ ಗುರಿಗಳನ್ನು ಇಲ್ಲವೇ ಉದ್ದೇಶಗಳನ್ನು ಸಾಧಿಸಲು ಇತರರಿಗೆ ನಿರ್ದೇಶನ ಮಾಡದಿದ್ದರೆ, ಆಗ ನಿರೂಪಣೆಯಿಂದ ನಾಯಕತ್ವವು ಗುರಿಗಳನ್ನು ನೇಮಿಸುವ ಅಗತ್ಯತೆ ಇರುತ್ತದೆ. ಇದಲ್ಲದೆ, ನಾಯಕತ್ವದ ಮೌಲ್ಲೀಕರಣವು ಮೊದಲ ಉದ್ದೇಶಗಳ ಅಗತ್ಯತೆಯುಳ್ಳದ್ದಾಗಿರುತ್ತದೆ. ನಾಯಕರು ತಾವು ಸಾಧಿಸಲಿಕ್ಕೆ ಹೋಗುವಂಥದ್ದನ್ನು ನೀರೂಪಿಸದಿದ್ದರೆ, ನಾಯಕತ್ವದ ಮೌಲ್ಲೀಕರಣವನ್ನು ಹೇಗೆ ಮಾಡಬಹುದು?

ಗುರಿಯನ್ನು ನೇಮಿಸುವದಕ್ಕೆ ಯಾವುದರ ಅಗತ್ಯತೆಯಿರುತ್ತದೆ? ನಾವು ಹತ್ತು ಸೂಚನೆಗಳನ್ನು ವಿಚಾರಿಸುವೆವು.

### ಗುರಿಗಳು ಪ್ರಾರ್ಥನೆಯಿಂದ ನೇಮಿಸಲ್ಪಡತಕ್ಕದ್ದು

ಗುರಿಯನ್ನು ನೇಮಿಸುವುದು ಪ್ರಾರ್ಥನೆಯಿಂದ ಪ್ರಾರಂಭವಾಗಬೇಕು. ಸಭಾ ನಾಯಕರು ಅನೇಕ ಕಾರಣಗಳಿಗಾಗಿ ಪ್ರಾರ್ಥಿಸುವ ಅಗತ್ಯತೆಯಿರುತ್ತದೆ. ಮೊದಲನೆಯದು, ನಾಯಕರಾಗಲೀ, ಇಲ್ಲವೇ ಇಡೀಯಾಗಿ ಸಭೆಯಾಗಲೀ ದೇವರಿಗೆ ಮೆಚ್ಚಿಗೆಯಾದದ್ದನ್ನು ಆತನ ಸಹಾಯವಿಲ್ಲದೇ ಸಾಧಿಸಲಿಕ್ಕಾಗುವದಿಲ್ಲ. "ಯೆಹೋವನು ಮನೆ ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವುದು ವ್ಯರ್ಥ" ಎಂದು ಕೀರ್ತನೆಗಾರನು ಹೇಳಿದ್ದಾನೆ (ಕೀರ್ತನೆ 127:1ಎ). ಎರಡನೆಯದು, ಜ್ಞಾನವು ದೇವರಿಂದ ಬರುತ್ತದೆ: "ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವುದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ" (ಯಾಕೋಬ 1:5). ಮೂರನೆಯದು, ದೇವರು ಸುಗ್ಗಿಗಾಗಿ ಕೆಲಸದವರನ್ನು ಕಳುಹಿಸುತ್ತಾನೆ (ಮತ್ತಾಯ 9:37, 38) ಮತ್ತು ಹೆಚ್ಚಿನದನ್ನು ಕೊಡುತ್ತಾನೆ (1 ಕೊರಿಂಥ 3:6). ನಾಲ್ಕನೆಯದು, ದೇವರು ಪ್ರಾರ್ಥನೆಗೆ ಉತ್ತರ ಕೊಡುತ್ತಾನೆ (1 ಯೋಹಾನ 5:14, 15).

## ಗುರಿಗಳು ಸಭೆಯ ನಿಯೋಗದೊಂದಿಗೆ ಸಾಮರಸ್ಯದಲ್ಲಿರತಕ್ಕದ್ದು

ಸಭೆಯ ಸೇವೆಯು ತಪ್ಪಿಹೋದವರನ್ನು ರಕ್ಷಿಸುವುದು (ಸುವಾರ್ತಾ ಸೇವೆ), ರಕ್ಷಿಸಲ್ಪಟ್ಟವರನ್ನು ರಕ್ಷಿಸಲ್ಪಟ್ಟವರನ್ನಾಗಿಡುವುದು (ಭಕ್ತಿವೃದ್ಧಿಗೊಳಿಸುವುದು), ಒಳ್ಳೇ ಕಾರ್ಯಗಳನ್ನು ಮಾಡುವುದು (ಪರೋಪಕಾರ ಮಾಡುವುದು) ಮತ್ತು ದೇವರಿಗೆ ಸ್ತೋತ್ರದ ಯಜ್ಞಗಳನ್ನು ಅರ್ಪಿಸುವುದು (ಆರಾಧನೆ) ಆಗಿರುತ್ತದೆ. ಸಭೆಯು ನೇಮಿಸುವ ಯಾವುದೇ ಗುರಿಯು ಒಂದಿಲ್ಲಾ ಒಂದು ರೀತಿಯಲ್ಲಿ ಈ ನಿಯೋಗವನ್ನು ಸಭೆಯು ನೆರವೇರಿಸುವದಕ್ಕೆ ಸಹಾಯ ಮಾಡತಕ್ಕದ್ದು.

## ಗುರಿಗಳು ಸಹಕಾರದಿಂದ ನೇಮಿಸಲ್ಪಡತಕ್ಕದ್ದು

ಗುರಿಗಳು ಸಹಕಾರದಿಂದ ನೇಮಿಸಲ್ಪಡತಕ್ಕದ್ದು. ಪ್ರತಿಯೊಬ್ಬನು - ಸಭಾ ಹಿರಿಯರು, ಡೀಕನರು, ಪ್ರಸಂಗಿಗಳು, ಬೋಧಕರು, ಮತ್ತು ಸದಸ್ಯರು - ಗುರಿಯನ್ನು ನೇಮಿಸುವದರಲ್ಲಿ ಒಳಗೊಂಡಿರಬೇಕು. ಸಹಕಾರದ ಭಾಗಿಗಳಾಗಿ ಗುರಿಯನ್ನು ನೇಮಿಸುವುದರ ಮೌಲ್ಯವು ಸ್ಪಷ್ಟವಾಗಿದೆ: ಗುರಿಗಳು ಸಭೆಯನ್ನು ಬಲಪಡಿಸುವ ಮೊದಲು ಸದಸ್ಯರು ಸಭೆಯ ಗುರಿಗಳನ್ನು "ನಮ್ಮ ಗುರಿಗಳು" ಎಂದು ಯೋಚಿಸತಕ್ಕದ್ದು; "ಹಿರಿಯರ" ಇಲ್ಲವೇ "ಪ್ರಸಂಗಿಯ" ಗುರಿಗಳೆಂದು ತಿಳಿಯಬಾರದು.

ನಾಯಕರಿಗೆ ಗುರಿಯನ್ನು - ನೇಮಿಸುವ ವಿಧಾನವನ್ನು ಪ್ರಾರಂಭಿಸುವ ಒಂದು ಒಳ್ಳೇ ಮಾರ್ಗವು ಸಭೆಯ ಎಲ್ಲಾ ಸದಸ್ಯರಿಗಾಗಿ ಗುರಿಯನ್ನು ನೇಮಿಸುವ ಕೂಟದಲ್ಲಿ ಭಾಗವಹಿಸಲು ಅವಕಾಶವನ್ನು ಒದಗಿಸುವುದಾಗಿದೆ. ಆ ಸಮಯದಲ್ಲಿ, ಎಲ್ಲರೂ ತಮ್ಮ ಕನಸುಗಳನ್ನೂ ನಿರೀಕ್ಷೆಗಳನ್ನೂ, ದೃಷ್ಟಿಗಳನ್ನೂ ಹಂಚಿಕೊಳ್ಳಬೇಕು ಮತ್ತು ವಿಚಾರ ಸಂಗ್ರಹದ ಕೂಟದಲ್ಲಿ ವಿಮರ್ಶಿಸಲ್ಪಡುವ ಭಯವಿಲ್ಲದೇ ಜನರು ತಮ್ಮ ವಿಚಾರಗಳನ್ನು ಹಂಚಿಕೊಳ್ಳತಕ್ಕದ್ದು.

ಆಗ, ಗುರಿಯನ್ನು ನೇಮಿಸುವ ವಿಧಾನವು ನಿರೀಕ್ಷೆಗಳಿಂದಲೂ ಕನಸುಗಳಿಂದಲೂ ನಿಜವಾದ ಯೋಜನೆಗಳಿಗೆ ಪ್ರಗತಿ ಹೊಂದತಕ್ಕದ್ದು. ಪ್ರತಿಯೊಂದು ಹಂತದಲ್ಲಿ ಸಾಧ್ಯವಾದಷ್ಟು ಹೆಚ್ಚು ಜನರು ಕೂಡಿಸಲ್ಪಡತಕ್ಕದ್ದು.

## ಗುರಿಗಳು ಶಿಕ್ಷಣದಿಂದ ಜೊತೆಗೂಡಿರತಕ್ಕದ್ದು

ಗುರಿಯನ್ನು ನೇಮಿಸುವದರಲ್ಲಿ ಭಾಗವಹಿಸುವವರೆಲ್ಲರೂ ಇದು ಸಭೆಯ ಎಲ್ಲಾ ಸದಸ್ಯರನ್ನು ಒಳಗೊಂಡಿರುತ್ತದೆ - ಪ್ರಗತಿ ವಿಧಾನದ ಮೊದಲು ಮತ್ತು ಪ್ರಗತಿಯಲ್ಲಿರುವಾಗ ಸಭೆಯು ಯಾವುದರ ಬಗ್ಗೆ ಇದೆ ಎಂಬುದನ್ನು ಕಲಿತು ಕೊಳ್ಳುವ ಅಗತ್ಯತೆಯಿದೆ. ಸದಸ್ಯರು ಅವಿದ್ಯಾವಂತರಾಗಿರುವವರೆಗೆ ಅವರ ಸಭೆಯ ಗುರಿಯು ಕೇವಲ ಉಳಿದು ಕೊಳ್ಳುವುದು, ತನ್ನನ್ನು ಸಂತುಷ್ಟಪಡಿಸಿಕೊಳ್ಳುವುದು, ಇಲ್ಲವೇ ಆರಾಧನೆಗಾಗಿ ಕೂಡಿ ಬರುವುದು ಆಗಿರುವುದು ಎಂದು ಸೂಚಿಸಬಹುದು. ಬೋಧಿಸುವುದು ಅಂಥ ಗುರಿಗಳು ಸಭೆಯ ಮುಖ್ಯ ಗುರಿಗಳಾಗುವದನ್ನು ತಪ್ಪಿಸಲಿಕ್ಕೆ ಸಹಾಯ ಮಾಡುತ್ತದೆ.

## ಗುರಿಗಳು ನ್ಯಾಯ ಸಮ್ಮತವಾದವುಗಳಾಗಿರತಕ್ಕದ್ದು

ಗುರಿಗಳು ಕ್ರೈಸ್ತತ್ವದ ಮಟ್ಟಗಳನ್ನೂ ಭಾವನೆಯನ್ನೂ ಪ್ರತಿಬಿಂಬಿಸತಕ್ಕದ್ದು. ಸತ್ಯದ ಅರಿವೆಯಿಲ್ಲದೇ, "ಯಾವುದೇ ಕ್ರಯದಿಂದಾರೂ ಬೆಳವಣಿಗೆಯ"ನ್ನು ತನ್ನ ಗುರಿಯಂತೆ ಇಟ್ಟುಕೊಳ್ಳುವುದು ಒಂದು ಸ್ಥಳಿಕ ಸಭೆಗೆ ಯೋಗ್ಯವಾದದ್ದಾಗುವದಿಲ್ಲ. ಆತ್ಮಿಕ ಬೆಳವಣಿಗೆಯಿಲ್ಲದೆ ಸಂಖ್ಯೆಯಲ್ಲಿ ಬೆಳವಣಿಗೆಯಾಗುವದನ್ನು ಹುಡಕುವುದು ಒಂದು ಸ್ಥಳಿಕ ಸಭೆಗೆ ಯೋಗ್ಯವಾದದ್ದಾಗಿರುವದಿಲ್ಲ.

ಒಂದು ಸಭೆಗೆ ನ್ಯಾಯಬದ್ಧವಾದ ಕೆಲವು ಗುರಿಗಳು ಯಾವುವಾಗಿರಬೇಕು? ಕೆಲವು ಸಾಮಾನ್ಯವಾದ, ದೀರ್ಘಾವಧಿ ಗುರಿಗಳು ನ್ಯಾಯ ಬದ್ಧವಾಗಿರುವಂಥವುಗಳು ಈ ಕೆಳಗಿನಂತಿವೆ:

1. ಬಹಿರಂಗವಾಗಿಯೂ ಪ್ರತ್ಯೇಕವಾಗಿಯೂ ಅತೀ ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ನಮ್ಮ ಸಮಾಜದಲ್ಲೆಲ್ಲಾ ನಂಬಿಗಸ್ತಿಕೆಯಿಂದ, ದೇವರ ವಾಕ್ಯವನ್ನು ಪ್ರಕಟಿಸುವುದು
2. ಆತ್ಮಿಕ ಬೆಳವಣಿಗೆ ಮತ್ತು ವೈಯಕ್ತಿಕ ನೆರವೇರುವಿಕೆಗಾಗಿ ಎಲ್ಲರಿಗೂ ಸಾಕಷ್ಟು ಅವಕಾಶವಿರುವ ಪ್ರೀತಿಸುವ ಹಾಗೂ ಜೋಪಾಸನೆ ಅನ್ಯೋನ್ಯಯಾಗಿರುವುದು
3. ದೇವರನ್ನು ಮೆಚ್ಚಿಸುವಂಥ ಹಾಗೂ ಕ್ರೈಸ್ತರ ಭಕ್ತಿವೃದ್ಧಿಯನ್ನು ವೃದ್ಧಿಸುವಂಥಹುದುವಾದ ಆರಾಧನೆಗಾಗಿ ಅವಕಾಶಗಳನ್ನು ಒದಗಿಸುವುದು
4. ಸಭೆಯ ಪ್ರತಿಯೊಬ್ಬ ಸದಸ್ಯನ ಆತ್ಮಿಕ ಕ್ಷೇಮಾಭಿವೃದ್ಧಿ ಮಾಡುವುದು, ಪ್ರತಿಯೊಬ್ಬ ಸದಸ್ಯನು ಕ್ರಿಸ್ತನಂತಾಗುವದರಲ್ಲಿ, ಹಾಜರಿರುವದರಲ್ಲಿ, ಕೊಡುವಿಕೆಯಲ್ಲಿ ಮತ್ತು ಒಳಗೊಂಡಿರುವದರಲ್ಲಿ ನಂಬಿಗಸ್ತನಾಗಿರುವಾಗ ಮತ್ತು ಬೆಳೆಯುವಾಗ ಇದು ಸಂಭವಿಸುವುದು
5. ಸದಸ್ಯರಿಗೂ ಸದಸ್ಯರಲ್ಲದವರಿಗೂ ಲಾಭತರುವ ಪರೋಪಕಾರದ ಕಾರ್ಯಕ್ರಮದ ಮುಖಾಂತರ ಕ್ರಿಸ್ತನ ಪ್ರೀತಿಸುವ ಸ್ವಭಾವವನ್ನು ಪ್ರದರ್ಶಿಸುವುದು
6. ಇತರ ಸ್ಥಳಗಳಲ್ಲಿ ಸುವಾರ್ತೆಯನ್ನು ಸಾರುವುದು, ಮಿಶನ್ ಕೆಲಸಕ್ಕೆ ಸಹಾಯ ಮಾಡುವುದು
7. ಮೇಲಿನ ಗುರಿಗಳನ್ನು ಪೂರ್ತಿಗೊಳಿಸುವ ಕೃತ್ಯಗಳನ್ನು ಪ್ರಾರಂಭಿಸುವುದು

ಪ್ರತಿಯೊಂದು ಸ್ಥಳಿಕ ಸಭೆಯು ಪ್ರಾರ್ಥನೆಯ ಹಾಗೂ ಸಮಾಲೋಚನೆಯ ನಂತರ, ತನ್ನ ನ್ಯಾಯಬದ್ಧವಾದ ಗುರಿಗಳನ್ನು ಏರ್ಪಡಿಸಿಕೊಳ್ಳಬೇಕು.

## ಗುರಿಗಳು ಒಂದು ಸ್ಥಳಿಕ ಸಭೆಗೆ ನಿರ್ದಿಷ್ಟವಾದವುಗಳಾಗಿರತಕ್ಕದ್ದು

ಒಂದು ಸ್ಥಳಿಕ ಸಭೆಗಾಗಿ ಗುರಿಗಳು ಉದ್ಯೋಗಸ್ಥರ ಮಂಡಳಿ, ಮೂಲನಿಧಿಗಳು, ವರಗಳು ಮತ್ತು ಸಮಾಜದ ಸ್ವಭಾವಗಳನ್ನೊಳಗೊಂಡು ನಿರ್ದಿಷ್ಟ ಸ್ಥಳಿಕ ಸಭೆಯ ಪರಿಸ್ಥಿತಿಗಳನ್ನು ಲೆಕ್ಕಕ್ಕೆ ತೆಗೆದು ಕೊಳ್ಳಬೇಕು. ಸ್ಥಳಿಕ ಸಭೆಗಳು ವೈಯಕ್ತಿಕ ಸದಸ್ಯರು ಮಾಡಬಹುದಾದ್ದರಿಂದ ಹಾಗೂ ಸುತ್ತಲಿನ ಪರಿಸ್ಥಿತಿಗಳಿಂದ ಮಿತಿಗೊಂಡಿರಬಹುದು. ಉದಾಹರಣೆಯಾಗಿ, ಜನಸಂಖ್ಯೆಯು ಕಡಿಮೆಯಾಗುತ್ತಿರುವ ಕ್ಷೇತ್ರದಲ್ಲಿ ವಯಸ್ಸಾದ ಜನರನ್ನೊಳಗೊಂಡಿರುವ ಗ್ರಾಮದ ಸಭೆಗಿಂತ, ಹೊಸ ಸದಸ್ಯತ್ವದೊಂದಿಗೆ ಬೆಳೆಯುವ ಸಾಧ್ಯತೆಗಳಿರುತ್ತವೆ.

## ಗುರಿಗಳು ನಾಲ್ಕು ವಿಧಗಳಲ್ಲಿ ದೃಷ್ಟಿಸಲ್ಪಡತಕ್ಕದ್ದು

ನಾಲ್ಕು ರೀತಿಯ ಗುರಿಗಳು ಭಿನ್ನವಾಗಿ ತಿಳಿಯಲ್ಪಡತಕ್ಕದ್ದು. ಮೊದಲನೆಯದು, ಸಭೆಯ *ಅಂತಿಮ ಗುರಿಯು* ರಕ್ಷಣೆಯು - (ಅದು ಭಿನ್ನವಾದ ಮಾತುಗಳಲ್ಲಿ ಇಡಲ್ಪಟ್ಟರೂ) - ನಮಗಾಗಿ ಹಾಗೂ ಇತರರಿಗಾಗಿ ರಕ್ಷಣೆಯು ಆಗಿರುತ್ತದೆ. ಸಭೆಯಲ್ಲಿ ನಾವು ಮಾಡುವ ಪ್ರತಿಯೊಂದೂ ಈ ಅಂತಿಮ ಗುರಿಯ ಕಡೆಗೆ ನಡಿಸಲ್ಪಡತಕ್ಕದ್ದು.

ಎರಡನೆಯದು, *ದೀರ್ಘಾವಧಿಯ ಗುರಿಗಳಿರುವವು.* ಹೆಚ್ಚು ಜನರು ರಕ್ಷಿಸಲ್ಪಡುವಂತೆ ಸಹಾಯ ಮಾಡಲು ಮುಂದಿರುವ ವರ್ಷಗಳಲ್ಲಿ ಸಭೆಯು ಹೇಗೆ ಬೆಳವಣಿಗೆ ಹೊಂದಬೇಕು? ಭವಿಷ್ಯದಲ್ಲಿ ಐದು, ಹತ್ತು ಇಲ್ಲವೇ ಹದಿನೈದು ವರ್ಷಗಳಲ್ಲಿ ಸಭೆಯು ಏನಾಗಿರಬೇಕೆಂಬುದನ್ನು ನಾಯಕರು ಯೋಚಿಸತಕ್ಕದ್ದು. ಇಂದು ನೇಮಿಸಲ್ಪಟ್ಟ ಗುರಿಗಳು ಆ ದೀರ್ಘಾವಧಿಯ ಗುರಿಗಳನ್ನು ಸಾಧಿಸಲು ನಡಿಸತಕ್ಕದ್ದು.

*ಒಂದು ಸ್ಥಳಿಕ ಸಭೆಯ ಗುರಿಗಳು ಅದರ ದೀರ್ಘಾವಧಿಯ ಮತ್ತು ಅಂತಿಮವಾಗಿ ಗುರಿ*

*ಗಳು ತಲುಪಲ್ಪಡಬೇಕಾಗಿರುವ ಸಾಧನಗಳನ್ನು ಒಳಗೊಂಡಿರಬೇಕು.* ಇದು ಮೂರನೆಯ ತರದ ಗುರಿಗಳಿಗಾಗಿ, *ಅಲ್ಪಾವಧಿ ಗುರಿಗಳಿಗಾಗಿ* ಕರೆಯುವುದು. ಮುಂದಿನ ಆರು ತಿಂಗಳಲ್ಲಿ, ಒಂದು ವರ್ಷದಲ್ಲಿ ಇಲ್ಲವೇ ಎರಡು ವರ್ಷಗಳಲ್ಲಿ, ತನ್ನ ದೀರ್ಘಾವದಿ - ಗುರಿಗಳನ್ನು ಸಾಧಿಸಲು ಸಭೆಯು ಯಾವುದನ್ನು ಪೂರೈಸಬೇಕು? ಒಂದು ಸ್ಥಳಿಕ ಸಭೆಯು ದೊಡ್ಡ ಸಂಖ್ಯೆಯಲ್ಲಿ ಜನರು ರಕ್ಷಿಸಲ್ಪಡಲು ಸಹಾಯವಾಗುವಂತೆ, ಇಂದಿನಿಂದ ಐದು ವರ್ಷಗಳಲ್ಲಿ ತಾವು ಒಂದು ಹೊಸ ಕಟ್ಟಡವನ್ನು ಪೂರ್ತಿಸುವ ಅಗತ್ಯತೆ ಇರುವುದೆಂದು ನಿರ್ಣಯಿಸುವ ರೆಂದು ತಿಳಿಯಿರಿ. ಅದು ದೀರ್ಘಾವಧಿಯ ಗುರಿಯಾಗ ಬಹುದು. ಆ ದೀರ್ಘಾವದಿಯ ಉದ್ದೇಶವನ್ನು ಪೂರೈಸಲು ಹತ್ತಿರದ ಭವಿಷ್ಯದಲ್ಲಿ ಅವರು ಏನನ್ನು ಮಾಡುವ ಅಗತ್ಯತೆಯಿದೆ? ಮುಂದಿನ ವರ್ಷದೊಳಗಾಗಿ ಕೆಲವೊಂದು ಭಾನುವಾರ ವಿಶೇಷ ಕೊಡುಗೆ ಕೂಡಿಸುವುದು ಅವರ ಅಲ್ಪಾವಧಿ ಗುರಿಗಳಲ್ಲಿ ಒಂದಾಗಬಹುದು.

ನಾಲ್ಕನೆಯದು, *ಕಾರ್ಯಾಚರಣೆಯ ಗುರಿಗಳು* ಇಲ್ಲವೇ *ಸಹಾಯ ಮಾಡುವ ಗುರಿಗಳು ಅಗತ್ಯವಾಗಿವೆ.* ಅಲ್ಪಾವಧಿ ಗುರಿಗಳನ್ನು ಹೇಗೆ ತಲುಪಬೇಕು? ಸಮಯದ ನಿರ್ದಿಷ್ಟವಾದ ಅವಧಿಯಲ್ಲಿ ಯಾವ ಗಮನಾರ್ಹವಾದ ಗುರಿಗಳು ಸಾಧಿಸಲ್ಪಡಬೇಕು? ಈ "ಕಾರ್ಯಾಚರಣೆಯ ಗುರಿಗಳು" ಅಲ್ಪಾವಧಿ ಗುರಿಗಳನ್ನು ಸಾಧಿಸಲು ಅಗತ್ಯವಾದ ಯೋಜನೆಗಳಿಗೆ ಹಾಗೂ ಕಾರ್ಯಾಕ್ರಮಗಳಿಗೆ ಸಂಬಂಧಿಸಿರುತ್ತವೆ. ಮೇಲೆ ನಮೂದಿಸಿದ ಉದಾಹರಣೆಗಾಗಿ, ಒಂದು ಸ್ಥಳಿಕ ಸಭೆಯು ಆ ಕೆಳಗಿನ ಕಾರ್ಯಾಚರಣೆಯು ಗುರಿಗಳನ್ನು ನೇಮಿಸಿಕೊಂಡಿತು:

1. ಆ ಪ್ರಯತ್ನಕ್ಕೆ ಸಂಬಂಧಿಸಿ ದೇಣಿಗೆಗಳನ್ನು ಕೂಡಿಸುವ ಮೊದಲು ಮೂರು ಪ್ರಾರ್ಥನಾ ಕೂಟಗಳನ್ನು ನಡಿಸುವುದು
2. ದೇಣಿಗೆಗಳನ್ನು ಕೂಡಿಸುವ ಮೊದಲು ನಾಲ್ಕರಿಂದ ಆರು ವಾರಗಳವರೆಗೆ ಮನೆವಾರ್ತೆಯ ಬಗ್ಗೆ ಬೋಧಿಸುವುದು
3. ದೇಣಿಗೆ ಕೂಡಿಸುವ ಮೊದಲು ಕೊಡುಗೆಯ ಬಗ್ಗೆ ಸಭಾಪತ್ರದಲ್ಲಿ ಎಂಟು ಲೇಖನಗಳನ್ನು ಬರೆಯುವುದು
4. ಕೊನೆಯ ಎರಡು ತಿಂಗಳಲ್ಲಿ ಪ್ರತಿಯೊಂದು ಆರಾಧನೆಯಲ್ಲಿ ಕೊಡುಗೆಯ ಬಗ್ಗೆ ಪ್ರಕಟಿಸುವುದು
5. ಎಲ್ಲಾ ಸದಸ್ಯರ ಬೆಂಬಲ ಪಡೆಯಲು ಕೂಟಗಳ ಒಂದು ಸರಣಿಯನ್ನು ಏರ್ಪಡಿಸುವುದು
6. ನಾಯಕರಲ್ಲಿ ಒಬ್ಬನು ಸಹಾಯ ಕೇಳಲು ಪ್ರತಿಯೊಬ್ಬ ಸದಸ್ಯರನ್ನು ಸಂದರ್ಶಿಸುವುದು

ಈ ಗುರಿಗಳು ನಂಬಿಕೆಯಿಂದ ನೇಮಿಸಲ್ಪಡಬೇಕು ಸ್ಥಳಿಕ ಸಭೆಯು ಈ ಅಲ್ಪಾವಧಿ ಗುರಿಗಳನ್ನು ಪೂರೈಸಿದರೆ, ಅವರು ದೇವರ ಸಹಾಯದಿಂದ, ಅವರು ದೀರ್ಘಾವಧಿ ಗುರಿಗಳನ್ನು ಸಾಧಿಸುವರು, ಇದು ಪ್ರತಿಯಾಗಿ ಹೆಚ್ಚು ಜನರ ರಕ್ಷಣೆಗೆ ಅಂತಿಮವಾಗಿ ನಡಿಸುವುದು.

## ಗುರಿಗಳು ಪ್ರಮಾಣೀಕರಿಸುವಂಥವುಗಳಾಗಿರಬೇಕು

ಸಾಧ್ಯವಾದಷ್ಟು ಮಟ್ಟಿಗೆ, ಅಲ್ಪಾವಧಿ ಗುರಿಗಳು ಮತ್ತು ಕೃತಿಗಳು ಇಲ್ಲವೇ ಸಹಾಯ ಮಾಡುವ ಗುರಿಗಳು ಸಮಯದ ಒಂದು ನಿರ್ದಿಷ್ಟವಾದ ಅವಧಿಯೊಳಗೆ ತಲುಪಲಿಕ್ಕಾಗುವಂಥ ಗಮನಿಸುವ ಮಾತುಗಳಲ್ಲಿ ನೇಮಿಸಲ್ಪಡಬೇಕು. ಸ್ಥಳಿಕ ಸಭೆಯ ಗುರಿಯು ಉದಾಹರಣೆಯಾಗಿ, "ಕ್ರಿಸ್ತನಿಗಾಗಿ ಸಂಪರ್ಕಗಳನ್ನು ಮಾಡುವುದು" ಆಗಿರಬಾರದು. ಅದು, "ನಮ್ಮ ಆರಾಧನೆಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬರನ್ನು ಸಂದರ್ಶಿಸುವದರಿಂದ, ಸಮಾಜಕ್ಕೆ ಬರುವ ಯಾವುದೇ ಹೊಸಬರನ್ನು ಸಂದರ್ಶಿಸಿ ಅವರಿಗೆ ಊಟ ಒಯ್ಯುವದರಿಂದ ಮತ್ತು ಸಮಾಜದಲ್ಲಿ ಪ್ರತಿಯೊಂದು ಮನೆಗೆ ಸುವಾರ್ತಾ ಸಾಹಿತ್ಯವನ್ನು ವಿತರಿಸುವದರಿಂದ ಕ್ರಿಸ್ತನಿಗಾಗಿ

ಸಂಪರ್ಕಗಳನ್ನು ಮಾಡುವುದು" ಎಂದಾಗಿರಬೇಕು. ಈ ಕಾರ್ಯಗಳನ್ನು ಸಭೆಯು ತೆಗೆದು ಕೊಂಡಿರುವುದೋ ಇಲ್ಲವೋ ಎಂಬುದನ್ನು ನಾಯಕರು ತಿಳಿದುಕೊಳ್ಳಬೇಕು ಮತ್ತು ಪರೀಕ್ಷಿಸ ಬೇಕು. ಅವರು ತಮ್ಮ ಗುರಿಗಳನ್ನು ಮುಟ್ಟಿದ್ದರೆ, ಅವರು ತಿಳಿದು ಕೊಳ್ಳುವರು. ಸುಮ್ಮನೇ, "ನಮ್ಮ ಗುರಿಯು ಬೆಳೆಯಬೇಕು," "ನಮ್ಮ ಗುರಿಯು ಹೆಚ್ಚಾಗಿ ಕ್ರಿಸ್ತನಂತಿರಬೇಕು," ಇಲ್ಲವೇ "ನಮ್ಮ ಗುರಿಯು ಒಳ್ಳೆಯದನ್ನು ಮಾಡುವುದಾಗಿದೆ," ಎಂದು ಹೇಳುವುದು, ಸೋಲನ್ನೂ ನಿರಾಶೆಯನ್ನೂ ಆಮಂತ್ರಿಸುವದಾಗಿರುತ್ತದೆ.

## ಗುರಿಗಳು ನಿಯಂತ್ರಿಸಲ್ಪಡುವವುಗಳಾಗಿರತಕ್ಕದ್ದು

ಅಲ್ಪಾವಧಿಯ ಗುರಿಗಳು ಮತ್ತು ಕಾರ್ಯಗಳು ಇಲ್ಲವೇ ಸರಳತೆಯ ಗುರಿಗಳು ನಿಯಂತ್ರಿಸಬಲ್ಲವುಗಳಾಗಿರಬೇಕು. ಅಂದರೆ, ಸಭೆಯು ನಿಯಂತ್ರಿಸಲಾರದಂಥವುಗಳನ್ನಲ್ಲ ಆದರೆ ನಿಯಂತ್ರಿಸಲು ಸಾಧ್ಯವಾದ ಗುರಿಗಳನ್ನು ನೇಮಿಸಬೇಕು. ಉದಾಹರಣೆಯಾಗಿ, ಒಂದು ಸ್ಥಳಿಕ ಸಭೆಯು ಗುರಿಯನ್ನು ತಲುಪುವ ಸಾಧನೆಗಳನ್ನು ಕೂಡಿಸಿಕೊಂಡಿರದಿದ್ದರೆ ಕೊಡಲ್ಪಟ್ಟ ಒಂದು ವರ್ಷದಲ್ಲಿ ಇಪ್ಪತ್ತು ಬಾಪ್ತಿಸ್ಮಗಳಾಗುವ ಗುರಿಯನ್ನಿಟ್ಟು ಕೊಂಡಿರಬಾರದು. ಗುರಿಯನ್ನು ಸಾಧಿಸಲಿಕ್ಕೆ ಒಂದು ಯೋಜನೆಯಿಲ್ಲದೆ; ಅದು ಬೇಗನೇ ಮರೆತು ಹೋಗುವುದು. ಇನ್ನೊಂದು ಸಮಸ್ಯೆಯು ಅಸ್ತಿತ್ವದಲ್ಲಿರುವುದು: ಅವರಿಗೆ ಇಪ್ಪತ್ತು ಬಾಪ್ತಿಸ್ಮಗಳು ಇರುವವೋ ಇಲ್ಲವೋ ಎಂಬುದನ್ನು ಸಭೆಯು ನೇರವಾಗಿ ನಿಯಂತ್ರಿಸಲಾರದು. ಸಭೆಯ ಬೆಳವಣಿಗೆಯು ಸಂಪೂರ್ಣವಾಗಿ ಸದಸ್ಯರ ಮೇಲೆ ಅವಲಂಭಿಸಿರುವದಿಲ್ಲ; ಅವರು ಬೋಧಿಸುವ ಜನರ ಸ್ವೀಕರಿಸುವಿಕೆಯ ಮೇಲೆ (ಮತ್ತಾಯ 13:1-23) ಮತ್ತು ವೃದ್ಧಿಯನ್ನು ಕೊಡುವ ದೇವರ ಮೇಲೆ ಅವಲಂಭಿಸಿರುವುದು (1 ಕೊರಿಂಥ 3:6).

"ನಿಯಂತ್ರಿಸುವ ಶಕ್ತಿಯನ್ನು" ಒಳಗೊಂಡು ಗುರಿಗಳನ್ನು ನೇಮಿಸುವದರಲ್ಲಿ ಸ್ಥಳಿಕ ಸಭೆಯು ಹೇಗೆ ಮುಂದುವರಿಯುವುದು? ಒಂದು ಸಭೆಗೆ ಹೆಚ್ಚಾದವರನ್ನು ಕೂಡಿಸುವ ಒಂದು ಗುರಿಯನ್ನೊಳಗೊಂಡ, ನಾಲ್ಕು ಹೆಜ್ಜೆಗಳಲ್ಲಿ ಒಂದು ಉದಾಹರಣೆ ಇಲ್ಲಿರುವುದು.

ಮೊದಲನೆಯದು, *ಸ್ಥಳಿಕ ಸಭೆಯು ಗುರಿಗಳನ್ನು ನೇಮಿಸತಕ್ಕದ್ದು.* ಮುಂದಿನ ವರ್ಷದಲ್ಲಿ ಸ್ಥಳಿಕ ಸಭೆಗೆ ಇಪ್ಪತ್ತು ಜನರು ಹೆಚ್ಚಾಗಿ ಕೂಡಬೇಕೆಂದು ಅವರು ಬಯಸುವರು. ತಮ್ಮ ಗುರಿಯನ್ನು ಸಾಧಿಸುವದಕ್ಕಾಗಿ ಅವರು ಈ ಕೆಳಗಿನ ಕಾರ್ಯವನ್ನು ಇಲ್ಲವೇ ಕಾರ್ಯಾಚರಣೆಯ ಗುರಿಗಳನ್ನು ತೀರ್ಮಾನಿಸಿಕೊಳ್ಳುವರು:

1. ವೈಯಕ್ತಿಕ ಕೆಲಸದ ಮೇಲೆ ಹನ್ನೆರಡು ಪ್ರಸಂಗಗಳನ್ನು ಪ್ರಸಂಗಿಸುವುದು.
2. ಸದಸ್ಯರಿಗಾಗಿ ವೈಯಕ್ತಿಕ ಸುವಾರ್ತಾ ಕಾರ್ಯಾಗಾರವನ್ನು ಏರ್ಪಡಿಸುವುದು.
3. ಪ್ರತಿಯೊಬ್ಬ ಸದಸ್ಯನು ಸಂದರ್ಶಕರನ್ನು ಕರತರುವಂತೆ ಪ್ರೋತ್ಸಾಹಿಸುವುದು ಹಾಗೂ ಪ್ರತಿಯೊಬ್ಬ ಸಂದರ್ಶಕನನ್ನು ಸ್ವಾಗತಿಸುವುದು.
4. ಪ್ರತಿಯೊಬ್ಬ ಸಂದರ್ಶಕನನ್ನು ಸಂದರ್ಶಿಸುವುದು.
5. "ನಿರೀಕ್ಷಣೆಯ ಯಾದಿಯನ್ನು" ಮಾಡುವುದು ಮತ್ತು ವರ್ಷದಲ್ಲಿ ನಾಲ್ಕು ಸಲ ಅಂಚೆಯಿಂದ ಯಾದಿಯಲ್ಲಿರುವ ಪ್ರತಿಯೊಬ್ಬರನ್ನು ಸಂಪರ್ಕಿಸುವುದು.
6. ನಮ್ಮೊಂದಿಗೆ ಆರಾಧಿಸುವದಕ್ಕಾಗಿ ನಮ್ಮ ಸಮಾಜದ ನಿವಾಸಿಗಳನ್ನು ಆಮಂತ್ರಿಸುವದಕ್ಕಾಗಿ ಮನೆಗಳನ್ನು ಸಂದರ್ಶಿಸುವ ಒಂದು ಕಾರ್ಯಕ್ರಮ ಏರ್ಪಡಿಸುವುದು.
7. ಆ ಕಾರ್ಯಕ್ರಮವನ್ನು ಚೆನ್ನಾಗಿ ಯೋಜಿಸಿದ ಸುವಾರ್ತಾ ಕೂಟದೊಂದಿಗೆ ಪೂರ್ತಿಗೊಳಿಸುವುದು.
8. ಸಮಾಜದಲ್ಲಿರುವ ಪ್ರತಿಯೊಂದು ಹೊಸ ಕುಟುಂಬವನ್ನು ಸಂಪರ್ಕಿಸುವುದು.
9. ಸಮಾಜದಲ್ಲಿಯ ಪ್ರತಿಯೊಬ್ಬ ಅಪನಂಬಿಗಸ್ತ ಕ್ರೈಸ್ತನನ್ನು ಸಂಪರ್ಕಿಸುವುದು.

*ಎರಡನೆಯದು, ಸದಸ್ಯರು ಗುರಿಗಳನ್ನು ಅನುಸರಿಸಿಕೊಂಡು ಹೋಗುವ ಅಗತ್ಯತೆಯಿದೆ.* ಅವರು ಕೃತ್ಯದ ಇಲ್ಲವೇ ಅನುಕೂಲ ಮಾಡಿಕೊಡುವ ಗುರಿಗಳ ತಳಹದಿಯ ಮೇಲೆ ಕಾರ್ಯಮಾಡಬೇಕು. ಅಂದರೆ, ಅವರು ಈಗ ಯೋಜಿಸಲ್ಪಟ್ಟ ಆ ಸಂಗತಿಗಳನ್ನು ಮಾಡತಕ್ಕದ್ದು.

*ಮೂರನೆಯದು, ನಾಯಕರು ಪರಿಣಾಮಗಳ ಮೌಲ್ಯಮಾಪನ ಮಾಡಬೇಕು.* "ನಾವು ಗುರಿಗಳನ್ನು ಮುಟ್ಟಿದ್ದೇವೆಯೋ? ಸಭೆಗೆ ಹೆಚ್ಚಿನವರು ಸೇರಿಕೊಂಡಿದ್ದಾರೋ?" ಎಂದು ಕೇಳುವದರಿಂದ ಮೌಲ್ಯಮಾಪನವು ಪ್ರಾರಂಭಿಸಲ್ಪಡಬೇಕು. ಹಾಗಿದ್ದರೆ ಒಳ್ಳೆಯದು. "ದೇವರ ಸಹಾಯದಿಂದ, ನಾವು ಕಾರ್ಯವನ್ನು ಯೋಜಿಸಿದೆವು ಮತ್ತು ಯೋಜನೆಯ ಕೆಲಸ ಮಾಡಿದೆವು" ಎಂದು ಅವರು ಹೇಳುವರು.

ಸ್ಥಳಿಕ ಸಭೆಗೆ ಹೆಚ್ಚಿನವರು ಕೂಡಿಸಲ್ಪಡದಿದ್ದರೆ; "ಯಾಕೆ ಇಲ್ಲ?" ಎಂದು ನಾಯಕರು ಕೇಳುವ ಅಗತ್ಯತೆಯಿದೆ. ಇತರ ಪ್ರಶ್ನೆಗಳನ್ನು ಕೇಳಬೇಕು: "ಮಾಡಲಿಕ್ಕೆ ನಾವು ಯೋಜಿಸಿದ್ದನ್ನು ಮಾಡಿದ್ದೇವೆಯೋ? ನಮ್ಮ ಕಾರ್ಯವನ್ನು (ಇಲ್ಲವೇ ಸಹಾಯಕವಾದ) ಗುರಿಗಳನ್ನು ಕೈಕೊಂಡಿದ್ದೇವೆಯೋ?" ಅವನು ಮಾಡಿದ್ದರೆ, ಆಗ ಬಹುಶಃ ಅವರು ಇತರರನ್ನು ಮಾರ್ಪಡಿಸಲು ಅಗತ್ಯವಾದ ಕೆಲಸದ ಮೊತ್ತವನ್ನು ತಪ್ಪಾಗಿ ಎಣಿಸಿರಬಹುದು. ಆಗ ಅವರು ಹೆಚ್ಚಾದದ್ದನ್ನು - ಇಲ್ಲವೇ ಕೆಲವೊಂದು ಭಿನ್ನವಾದದ್ದನ್ನು - ಗಾತ್ರದಲ್ಲಿ ಬೆಳೆಯಲು ಮಾಡಬೇಕಾಗುತ್ತದೆ. ಕೃತ್ಯದ ಗುರಿಗಳನ್ನು ಅವರು ತಲುಪದಿದ್ದರೆ, ಆಗ ಅವರು, "ನಮ್ಮ ಸಭೆಯ ಘಾತ್ರ ಮತ್ತು ರಚನೆಗೆ ಸಂಬಂಧಿಸಿ ನಮ್ಮ ಗುರಿಗಳು ಅವಾಸ್ತವಿಕವಾದವುಗಳಾಗಿದ್ದವೋ? ನಾವು ಬಹುಶಃ ಬಹಳ ಹೆಚ್ಚಾದದ್ದನ್ನು ನಮ್ಮ ಸದಸ್ಯರಿಂದ ನಿರೀಕ್ಷಿಸಿದೆವು" ಎಂದು ಹೇಳತಕ್ಕದ್ದು. ಅವರು ಹೆಚ್ಚು ವಾಸ್ತವಿಕವಾದ ಗುರಿಗಳನ್ನು ನೇಮಿಸಿಕೊಳ್ಳುವ ಅಗತ್ಯತೆಯಿದೆ ಇಲ್ಲವೇ ಇತರರು ಏನು ಮಾಡಬಹುದು ಮತ್ತು ಮಾಡತಕ್ಕದ್ದು ಎಂದು ಹೇಗೆ ಪ್ರೇರೇಪಿಸಲ್ಪಡ ಬೇಕೆಂಬುದನ್ನು ನಿರ್ಧರಿಸತಕ್ಕದ್ದು?

*ನಾಲ್ಕನೆಯದು, ಅವರು ಹೊಸ ಗುರಿಗಳನ್ನು ನೇಮಿಸತಕ್ಕದ್ದು.* ಒಂದು ವರ್ಷದ ಅನುಭವವು ಮುಂದಿನ ವರ್ಷಕ್ಕಾಗಿ ಗುರಿಗಳನ್ನು ನೇಮಿಸಲು ಸ್ಥಳಿಕ ಸಭೆಗೆ ಮಾರ್ಗದರ್ಶನ ಮಾಡಬಲ್ಲದು. ವಿದ್ಯುತ್ತ್ ಬೆಳಕಿನ ಬಲ್ಬ್‌ಗಾಗಿ ಯಶಸ್ವಿಯಾಗಿ ಉಪಯೋಗಿಸಲು ಒಂದನ್ನು ಕಂಡುಕೊಳ್ಳುವ ಮೊದಲು ಥೊಮಸ್ ಎಡಿಸನ್ ಭಿನ್ನವಾದ ವಸ್ತುಗಳಿಂದ ಸುಮಾರು ಒಂದು ಸಾವಿರ ಪ್ರಯೋಗಗಳನ್ನು ಮಾಡಿದನು ಎಂದು ವರದಿಮಾಡಲಾಗಿದೆ. ಆ ಒಂದು ಸಾವಿರ ಸೋಲುಗಳ ಬಗ್ಗೆ ಅವನು ವಿಷಾದಿಸಿದನೋ ಎಂದು ಅವನು ಕೇಳಲ್ಪಟ್ಟಾಗ, ಅವನು ಅವುಗಳನ್ನು ಸೋಲುಗಳೆಂದು ತಿಳಿಯಲೇ ಇಲ್ಲ ಎಂದು ಹೇಳಿದನು. ಪ್ರತಿಯೊಂದೂ ಯಶಸ್ಸಾಗಿತ್ತು, ಯಾಕೆಂದರೆ ಪ್ರತಿಯೊಂದರಲ್ಲಿ ಅದನ್ನು ಮಾಡಬಾರದೆಂಬ ಒಂದು ಮಾರ್ಗವನ್ನು ಕಂಡು ಕೊಂಡೆನು ಎಂದು ಹೇಳಿದನು. ನಿಯಂತ್ರಿಸಬಹುದಾದ ಗುರಿಗಳನ್ನು ನೇಮಿಸಿಕೊಳ್ಳುವದರ ಬಗ್ಗೆ ನಮಗೆ ಅರುಹು ಇದ್ದರೆ ಮತ್ತು ಅವು ನಮಗೆ ಬೋಧಿಸುವ ಪಾಠಗಳನ್ನು ನಾವು ಕಲಿತು ಕೊಂಡರೆ ಯಾವುದೇ ಪ್ರಯತ್ನವನ್ನು ಸೋಲು ಎಂದು ನಾವು ಎಂದೂ ಯೋಚಿಸುವದಿಲ್ಲ. ಸಭೆಯ ಕೆಲಸವನ್ನು ಮಾಡಬಾರದ ಇನ್ನೊಂದು ಮಾರ್ಗವನ್ನು ನಾವು ಕಲಿತು ಕೊಳ್ಳಬಹುದು.

## ಗುರಿಗಳು ದೇವರ ಬಲದ ಮೇಲೆ ಅವಲಂಭಿಸಿರತಕ್ಕದ್ದು

ಸ್ಥಳಿಕ ಸಭೆಯ ಗುರಿಗಳ ಆಶಾವಾದದಿಂದ ಮತ್ತು ಸಾಮರ್ಥ್ಯದಿಂದ ದೇವರ ಬಲವು ತುಂಬಲ್ಪಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ, "ನಮ್ಮಲ್ಲಿ ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ" ಆತನು "ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾಗಿರುವನು" (ಎಫೆಸ 3:20). ಒಂದು ಗುರಿಯ ಮೇಲೆ ಕೇಂದ್ರೀ

ಕರಿಸಿ ಅದನ್ನು ಸಾಧಿಸಲು ತಮ್ಮ ಮಾನವ ಸಾಮರ್ಥ್ಯವನ್ನು ಉಪಯೋಗಿಸುವವರು ಸಾಧ್ಯವಾಗಿದೆಯೆಂದು ಅವರು ಯೋಚಿಸುವದಕ್ಕಿಂತ ಹೆಚ್ಚಾದದ್ದನ್ನು ಸಾಧಿಸುವರು. ದೇವರು ನಮ್ಮ ಸಂಗಡ ಇರುವಾಗ ಇನ್ನೂ ಹೆಚ್ಚಾದದ್ದನ್ನು ಸಾಧಿಸಬಲ್ಲೆವಲ್ಲವೇ!

## ಮುಕ್ತಾಯ

ದೇವರ ನಾಯಕರು ಯಾವಾಗಲೂ ಒಂದೇ ಮನಸ್ಸಿನವರೂ ಒಂದೇ ಗುರಿಯುಳ್ಳ ಜನರೂ ಆಗಿದ್ದರು. ನೆಹೆಮೀಯನಿಗೆ ಒಂದೇ ಗುರಿಯಿತ್ತು: ಅವನ ಉದ್ದೇಶವು ಯೆರೂಸಲೇಮಿನ ಗೋಡೆಗಳನ್ನು ಕಟ್ಟುವುದಾಗಿತ್ತು (ನೆಹೆಮೀಯ 2:5, 17). ಅವನು ಪ್ರಾರ್ಥಿಸಿದನು, ಸಹಾಯಕ್ಕಾಗಿ ಹುಡುಕಿದನು, ಪರಿಸ್ಥಿತಿಯನ್ನು ಪರಿಶೀಲಿಸಿದನು, ಜನರನ್ನು ಮನವೊಲಿಸಿದನು, ತನ್ನ ಸೈನ್ಯಗಳನ್ನು ಬಲಪಡಿಸಿದನು, ಕಾರ್ಯವನ್ನು ಸಂಘಟಿಸಿದನು, ಸಮಸ್ಯೆಗಳನ್ನು ಜಯಿಸಿದನು, ಮತ್ತು ಗುರಿಯನ್ನು ಸಾಧಿಸಿದನು (ನೆಹೆಮೀಯ 4:6; 6:15). ಪೌಲನು ಒಂದೇ ಉದ್ದೇಶವುಳ್ಳ ಮನುಷ್ಯನಾಗಿದ್ದನು: "ನಾನಂತೂ ಹಿಡಿದು ಕೊಂಡವನೆಂದು ನನ್ನನ್ನು ಈ ವರೆಗೂ ಎಣಿಸಿಕೊಳ್ಳುವದಿಲ್ಲ; ಆದರೆ ಒಂದನ್ನು ಮಾಡುವೆನು ..." (ಫಿಲಿಪ್ಪಿ 3:13, 14) ಎಂದು ಅವನು ಹೇಳಿದನು. ಕ್ರಿಸ್ತನು ಒಂದು ಉದ್ದೇಶದ ಮೇಲೆ ಕೇಂದ್ರೀಕರಿಸಿದ್ದ ನಾಯಕನಾಗಿದ್ದನು. "ನನ್ನ ಚಿತ್ತದಂತೆ ನಡೆಯುವದಕ್ಕಾಗಿ ನಾನು ಬಂದಿಲ್ಲ, ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವದಕ್ಕೆ ಪರಲೋಕದಿಂದ ಬಂದೆನು" (ಯೋಹಾನ 6:38); "ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" (ಲೂಕ 19:10); "ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು" (ಮತ್ತಾಯ 20:28) ಎಂದು ಆತನು ಹೇಳಿದನು. ಆತನು ತನ್ನ ಇಡೀ ಜೀವಿತವನ್ನು ತನ್ನ ಒಂದೇ ದೊಡ್ಡ ಉದ್ದೇಶದ ದೃಷ್ಟಿಕೋನದಲ್ಲಿ ಜೀವಿಸಿದನು: ತನ್ನ ಯಾಜ್ಞಕ ಮರಣದ ಮುಖಾಂತರ ತಪ್ಪಿ ಹೋದವರನ್ನು ರಕ್ಷಿಸುವದರಿಂದ ತಂದೆಯ ಚಿತ್ತವನ್ನು ಮಾಡುವುದು. ಆತನು ಸೈತಾನನ್ನು ಸೋಲಿಸಿದ ಶಿಲುಬೆಯ ಮೇಲಿನ ಆತನ ಜಯವು (ಇಬ್ರಿಯ 2:14), ಅವನ ಉದ್ದೇಶದ ಏಕಮನಸ್ಸಿನ ಸಾಧನೆಯ ಕಾರಣದಿಂದ ಆಯಿತು! ದೇವರಿಗೆ ಇಂದು ಇನ್ನೂ ಗುರಿಯುಳ್ಳ ನಾಯಕರ ಅಗತ್ಯತೆಯಿದೆ.

---

ಟಿಪ್ಪಣಿ

[1]"ಧ್ಯೇಯಗಳು" ಇಲ್ಲವೇ "ಉದ್ದೇಶಗಳು" ಇಂಥ ಇತರ ಮಾತುಗಳು ಉಪಯೋಗಿಸಲ್ಪಡಬಹುದು. ಭಿನ್ನವಾದ ಮಾತುಗಳನ್ನು ಉಪಯೋಗಿಸುವದರಲ್ಲಿ ಕೆಲವೊಂದು ಮೌಲ್ಯವಿದ್ದರೂ, ಸರಳತೆಯ ನಿಮಿತ್ತವಾಗಿ ಈ ಪಾಠದಲ್ಲೆಲ್ಲಾ "ಗುರಿಗಳು" ಎಂಬ ಮಾತನ್ನು ಉಪಯೋಗಿಸುವದನ್ನು ಆಯ್ದುಕೊಂಡಿದ್ದೇವೆ.